09-12-2024
(5)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನವೀನ ಕೆ.ಎಸ್., ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ "ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು, ಹಳ್ಳಿ ಮೈಸೂರು ಹೋಬಳಿ, ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂಬರ್.46 ರ ರೈತ ಶ್ರೀ ಚಂದ್ರಪ್ಪ ಬಿನ್ ಲೇಟ್ ಬಸಪ್ಪ, ರವರ ಪ್ರಕರಣಕ್ಕೆ ಸಂಬಂಧಿಸಿದಂತೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯದ ಕುರಿತು" ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

*[ ಮಾನ್ಯ ಸದಸ್ಯರಾದ ನವೀನ ಕೆ.ಎಸ್, ರವರು ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನಲ್ಲಿ ಶ್ರೀ ಚಂದ್ರಪ್ಪ ರವರ ಖಾಸಗಿ ಜಮೀನಿನಲ್ಲಿ ಬೆಳೆದಿರುವ ಶ್ರೀಗಂಧ ಮರಗಳಿಗೆ ಮರ ಕಡಿತಲೆ ಅನುಮತಿಗೆ ವಿಳಂಬ ಮಾಡುತ್ತಿರುವ ಮತ್ತು ಇದಕ್ಕೆ 2 ಲಕ್ಷ ಲಂಚ ಕೇಳುತ್ತಿರುವ ಅರಣ್ಯ ಅಧಿಕಾರಿಗಳಿಗೆ ವಜಾ ಮಾಡಬೇಕು ಎಂದು ಕೋರಿರುವ ಬಗ್ಗೆ ].*

*****

ಶ್ರೀಮತಿ ಎಸ್.ಎಂ. ಸರ್ವಮಂಗಳ ಕೋಂ ಚಂದ್ರಪ್ಪ ಇವರು ದಿನಾಂಕ 17.01.2024 ಮತ್ತು 02.05.2024ರಂದು ವಲಯ ಅರಣ್ಯಾಧಿಕಾರಿ, ಹೊಳೆನರಸೀಪುರ ಇವರಿಗೆ ವಿಳಾಸಿಸಿ ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂ. 46 ರಲ್ಲಿ ಬೆಳೆದಿರುವ ಶ್ರೀಗಂಧದ ಮರ ಕಡಿತಲೆ ಮಾಡಲು ಅನುಮತಿ ನೀಡಬೇಕಾಗಿ ಮನವಿ ಸಲ್ಲಿಸಿರುತ್ತಾರೆ. ಸದರಿ ಮನವಿಯ ಮೇರೆಗೆ ಇಲಾಖೆಯ ಸಿಬ್ಬಂದಿಯವರು ದಿನಾಂಕ 20.01.2024 ಹಾಗೂ 06.05.2024 ರಂದು ಸ್ಥಳ ಪರಿಶೀಲಿಸಿ, ಯಾವುದೇ ಬಲಿತ ಶ್ರೀಗಂಧ ಮರಗಳು ಸ್ಥಳದಲ್ಲಿ ಕಂಡು ಬಂದಿಲ್ಲವಾದ್ದರಿಂದ ಅರ್ಜಿಯನ್ನು ಪರಿಗಣಿಸಲು ಬರುವುದಿಲ್ಲ ಎಂದು ವಲಯ ಅರಣ್ಯಾಧಿಕಾರಿ ಹೊಳೆನರಸೀಪುರ ರವರು ಮೌಖಿಕವಾಗಿ ತಿಳಿಸಿರುತ್ತಾರೆ.

ದಿನಾಂಕ 22.10.2024 ರಂದು ದೂರುದಾರರು ವಲಯ ಅರಣ್ಯಾಧಿಕಾರಿ, ಹೊಳೆನರಸೀಪುರ ರವರಿಗೆ ದೂರು ಸಲ್ಲಿಸಿ ಶ್ರೀ ಚಂದ್ರಪ್ಪ ಇವರು ತಮ್ಮ ತೋಟದ ಮನೆಯಲ್ಲಿ ಶ್ರೀಗಂಧವನ್ನು ಕಡಿದು ದಾಸ್ತಾನು ಇಟ್ಟಿರುವುದಾಗಿ ತಿಳಿಸಿ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ. ಈ ಸಂಬಂಧ ವಲಯದ ಸಿಬ್ಬಂದಿಗಳು, ದಿನಾಂಕ: 23.10.2024 ರಂದು ಮೇಲ್ಕಂಡ ಸ್ಥಳಕ್ಕೆ ತೆರಳಿ ಶ್ರೀಗಂಧದ ಮರಗಳ ದಾಸ್ತಾನು ಪರಿಶೀಲಿಸಲಾಗಿ, ಸದರಿಯವರು ಸರ್ವೆ ನಂ.46ರ ಜಮೀನಿನ ಬದುವಿನ ಬಳಿ ಕರೆದುಕೊಂಡು ಹೋಗಿದ್ದು, 04 ಸಣ್ಣ ಗುಂಡಿಗಳನ್ನು ಮಾತ್ರ ತೋರಿಸಿದ್ದು, ತಾಳೆ ಮಾಡಿದಾಗ ಒಂದಕ್ಕೊಂದು ತಾಳೆಯಾಗದೇ ಕಂಡು ಬಂದಿದ್ದರಿಂದ ದಾಸ್ತಾನು ಮಾಡಿದ್ದ, ಶ್ರೀಗಂಧ ಕಾಂಡಗಳು, ಬೇರು ಸಹಿತ ಬುಡ, ಬೇರುಗಳ ಚೂರು ಹಾಗೂ ರೆಂಬೆ ಕೊಂಬೆಗಳನ್ನು ಇಲಾಖಾ ಪರ ವಶಪಡಿಸಿಕೊಂಡು, ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 62 ,83, 86, 87, ರ ಪ್ರಕಾರ ಮತ್ತು ಕರ್ನಾಟಕ ಅರಣ್ಯ ನಿಯಮ 1969 ರ ನಿಯಮ 84, 108 ರೀತ್ಯಾ ದಿನಾಂಕ: 23.10.2024 ರಂದು ಅರಣ್ಯ ಮೊಕದ್ದಮೆ ಸಂಖ್ಯೆ: 10/2024-25 ದಾಖಲಿಸಿ, ಪ್ರಥಮ ವರ್ತಮಾನ (FIR) ವರದಿಯೊಂದಿಗೆ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ ಪ್ರಕರಣವು ವಿಚಾರಣಾ ಹಂತದಲ್ಲಿ ಇರುತ್ತದೆ.

ಹೊಳೆನರಸೀಪುರ ತಾಲ್ಲೂಕು, ಹಳ್ಳಿಮೈಸೂರು ಹೋಬಳಿ ಹೊನ್ನೇನಹಳ್ಳಿ ಗ್ರಾಮದ ವಾಸಿಯಾದ ಶ್ರೀಮತಿ ಎಸ್.ಎಂ.ಸರ್ವಮಂಗಳ ಕೋಂ ಬಿ.ಚಂದ್ರಪ್ಪ, ರವರ ಜಮೀನಿನಲ್ಲಿ ಶ್ರೀಗಂಧ ಮರ ಕಡಿತಲೆಯಾದ ಸಂಬಂಧ ಇಲಾಖೆಯಿಂದ ದಾಖಲಿಸಿರುವ ಅರಣ್ಯ ಮೊಖದ್ದಮೆ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ಅರ್ಜಿದಾರರ ಮನವಿಯ ದಿನಾಂಕ | ಅರಣ್ಯ ಮೊಖದ್ದಮೆ (ಕಳ್ಳತನ ಪ್ರಕರಣ) ಸಂಖ್ಯೆ ಮತ್ತು ದಿನಾಂಕ | ಸ್ವತ್ತಿನ ಪರಿಮಾಣ | ಷರಾ |
|---|---|---|---|---|
| 1 | 04.08.2012 | 05/2012-13, ದಿನಾಂಕ: 11.09.2012 | ಶ್ರೀಗಂಧದ ತುಂಡು 09(ಸಂ)= 0.039 ಘ.ಮೀ (45.90 ಕೆ.ಜಿ) | ಕಳ್ಳತನ ಪ್ರಕರಣ (ನಿಗಧಿತ ಕಾಲಮಿತಿಯ ಒಳಗೆ ಸಾಗಾಣಿಕೆ ಮಾಡಲು ಅನುಮತಿ ನೀಡಿದೆ) |

| | | | | |
|---|---|---|---|---|
| 2 | 29.07.2015 | - | ಶ್ರೀಗಂಧದ ಬುಡ 30(ಸಂ)= 275.00 ಕೆ.ಜಿ<br>ಶ್ರೀಗಂಧದ ತುಂಡು 50(ಸಂ)= 467.00 ಕೆ.ಜಿ<br>(ಅರ್ಜಿ ಪ್ರಕಾರ 50(ಸಂ) ಶ್ರೀಗಂಧದ ಮರಗಳು ಕಡಿತಲೆಯಾಗಿದ್ದು, ಕೆಲವು ಸ್ವತ್ತುಗಳನ್ನು ಕಳ್ಳಕಾಕರು ತೆಗೆದುಕೊಂಡು ಹೋಗಿದ್ದು, ಬಾಕಿ ಉಳಿದ ಶ್ರೀಗಂಧದ ಪರಿಮಾಣ) | ಕಳ್ಳತನ ಪ್ರಕರಣ (ನಿಗಧಿತ ಕಾಲಮಿತಿಯ ಒಳಗೆ ಸಾಗಾಣಿಕೆ ಮಾಡಲು ಅನುಮತಿ ನೀಡಿದೆ) |
| 3 | 17.02.2017 | 19/2017-18, ದಿನಾಂಕ: 19.08.2017 | ಬೇರು ಸಹಿತ ಬುಡ 50(ಸಂ)= 268.967 ಕೆ.ಜಿ<br>ಶ್ರೀಗಂಧದ ಕಾಂಡಗಳು = 156.957 ಕೆ.ಜಿ<br>ಕೊಂಬೆಗಳು = 165.721 ಕೆ.ಜಿ | ಕಳ್ಳತನ ಪ್ರಕರಣ (ನಿಗಧಿತ ಕಾಲಮಿತಿಯ ಒಳಗೆ ಸಾಗಾಣಿಕೆ ಮಾಡಲು ಅನುಮತಿ ನೀಡಿದೆ) |
| 4 | 21.03.2019 | 09/2019-20, ದಿನಾಂಕ: 12.02.2020 | ಬುಡ 45(ಸಂ)= 325.10 ಕೆ.ಜಿ<br>ಶ್ರೀಗಂಧದ ಕಾಂಡಗಳು = 214.00 ಕೆ.ಜಿ<br>ಕೊಂಬೆಗಳು = 136.700 ಕೆ.ಜಿ | ಕಳ್ಳತನ ಪ್ರಕರಣ (ನಿಗಧಿತ ಕಾಲಮಿತಿಯ ಒಳಗೆ ಸಾಗಾಣಿಕೆ ಮಾಡಲು ಅನುಮತಿ ನೀಡಿದೆ) |
| 5 | 06.05.2020 | 23/2020-21 ದಿನಾಂಕ: 19.08.2020 | ಬೇರು ಸಹಿತ ಬುಡ 14(ಸಂ) = 96.780 ಕೆ.ಜಿ<br>ಶ್ರೀಗಂಧದ ಕಾಂಡಗಳು = 111.100 ಕೆ.ಜಿ<br>ಕೊಂಬೆಗಳು = 85.00 ಕೆ.ಜಿ<br>ಸಣ್ಣ ಬೇರುಗಳು = 39.00 ಕೆ.ಜಿ. | ಕಳ್ಳತನ ಪ್ರಕರಣ (ನಿಗಧಿತ ಕಾಲಮಿತಿಯ ಒಳಗೆ ಸಾಗಾಣಿಕೆ ಮಾಡಲು ಅನುಮತಿ ನೀಡಿದೆ) |
| 6 | 01.04.2022 | 01/2022-23 ದಿನಾಂಕ: 14.05.2022 | ಬೇರು ಸಹಿತ ಬುಡ 16 (ಸಂ)= 94.100 ಕೆ.ಜಿ<br>ಶ್ರೀಗಂಧಧ ಕಾಂಡ = 105.500 ಕೆ.ಜಿ<br>ಕೊಂಬೆಗಳು = 263.00 ಕೆ.ಜಿ<br>ಬೇರು ಚೂರುಗಳು = 20.00 ಕೆ.ಜಿ. | ಕಳ್ಳತನ ಪ್ರಕರಣ (ನಿಗಧಿತ ಕಾಲಮಿತಿಯ ಒಳಗೆ ಸಾಗಾಣಿಕೆ ಮಾಡಲು ಅನುಮತಿ ನೀಡಿದೆ) |
| 7 | 05.05.2023 | ಗಾಳಿಮಳೆಗೆ ಬಿದ್ದಿರುವ 73 ಮರಗಳು | ಬೇರು ಸಹಿತ ಬುಡ 73(ಸಂ) = 429.00 ಕೆ.ಜಿ<br>ಶ್ರೀಗಂಧದ ಕಾಂಡ = 364.150 ಕೆ.ಜಿ<br>ಕೊಂಬೆಗಳು = 310.00 ಕೆ.ಜಿ<br>ಬೇರು ಚೂರುಗಳು = 64.00 ಕೆ.ಜಿ. | ಮಳೆಗಾಳಿಗೆ ಬಿದ್ದಿರುವ ಶ್ರೀಗಂಧದ ಮರ (ನಿಗಧಿತ ಕಾಲಮಿತಿಯ ಒಳಗೆ ಸಾಗಾಣಿಕೆ ಮಾಡಲು ಅನುಮತಿ ನೀಡಿದೆ) |
| | **ಒಟ್ಟು** | | **257 ಮರಗಳ ಸಂಖ್ಯೆ = 4566.845 ಕೆ.ಜಿ**<br>ಇವರೆವಿಗೂ 257 ಮರಗಳು | |
| ಇದುರೆವಿಗೂ 257 ಮರಗಳು + ಈಗ ದಾಖಲಿಸಿದ ಪ್ರಕರಣದಲ್ಲಿ 63 ಮರಗಳು = **ಒಟ್ಟು 320 ಮರಗಳು)** | | | | |

ಶ್ರೀಮತಿ ಎಸ್.ಎಂ.ಸರ್ವಮಂಗಳ ಕೋಂ ಶ್ರೀ ಬಿ.ಚಂದ್ರಪ್ಪ, ಇವರು ಈ ಹಿಂದೆ ಸಲ್ಲಿಸಿರುವ ಎಲ್ಲಾ ಮನವಿಗಳಲ್ಲಿ ಅರಣ್ಯ ಇಲಾಖೆಗೆ ಶ್ರೀಗಂಧ ಮರಗಳ ತೆರವು ಮಾಡಿ ಸ್ಯಾಂಡಲ್ ಬೋನಸ್ ನೀಡಲು ಕೋರಿರುವ ಎಲ್ಲಾ ಸಂದರ್ಭಗಳಲ್ಲಿಯೂ ಕಳ್ಳಕಾಕರಿಂದ ಹಾನಿಯಾಗುವ ಹಾಗೂ ಮಳೆಗಾಳಿಗೆ ಬಿದ್ದಿರುವ ಕಾರಣ ನೀಡಿ ಕರ್ನಾಟಕ ಅರಣ್ಯ ನಿಯಮ 1969 ರ ನಿಯಮ-108 ರಡಿಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವಿಭಾಗ, ಹಾಸನ, ರವರಿಂದ ಕಟಾವಣೆಗೆ ಅನುಮತಿ ಪಡೆಯದೇ ಮರಗಳನ್ನು ಕಟಾವಣೆ ಮಾಡಿ ಕರ್ನಾಟಕ ಅರಣ್ಯ ನಿಯಮ

1969 ರ ನಿಯಮ-108(2) ಮತ್ತು 108(4) ಉಲ್ಲಂಘಿಸಿ ಇತರೆಡೆಯಿಂದ ಸಂಗ್ರಹಿಸಲು ಪ್ರಯತ್ನ ಮಾಡಿರುವುದು ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿದ ಶ್ರೀ ಗಂಧ ಉತ್ಪನ್ನಗಳನ್ನು ವಶಪಡಿಸಿಕೊಳ್ಳಲಾಗಿದೆ ಆದುದರಿಂದ, ಸದರಿಯವರ ಮೇಲೆ ಅರಣ್ಯ ಮೊಕದ್ದಮೆ ಸಂಖ್ಯೆ: 10/2024-25 ದಿನಾಂಕ: 23.10.2024ನ್ನು ದಾಖಲಿಸಿ, ಪ್ರಥಮ ವರ್ತಮಾನ (FIR) ವರದಿಯೊಂದಿಗೆ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ಈ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿ ಇರುತ್ತದೆ.

**ಸಂಖ್ಯೆ: ಅಪಜೀ 37 ಎಫ್‌ಎಸ್ ಡಬ್ಲ್ಯೂ 2024**

**(ಈಶ್ವರ ಬಿ.ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು